ಇ) ಶ್ರೀ ಕ್ಷೇತ್ರ ಸೋಗಲದಲ್ಲಿ ಅರಣ್ಯ ಬೆಳೆಸಲು ಸಾಕಷ್ಟು ಸ್ಥಳ ಇದ್ದು ಅಲ್ಲಿ ಹೆಚ್ಚಿಗೆ ಅರಣ್ಯ ಬೆಳಸಲು ಕ್ರಮ ಕೈಗೊಳ್ಳುವರೇ?

ಈ) ಅತಿಕ್ರಮಣವನ್ನು ತಪ್ಪಿಸುವ ಸಲುವಾಗಿ ಶ್ರೀ ಕ್ಷೇತ್ರ ಸೋಗಲದಲ್ಲಿ ಸುತ್ತಲೂ ಗೋಡೆಯನ್ನಾಗಲೀ ಅಥವಾ ತಂತಿ ಬೇಲಿಯನ್ನಾಗಲೀ ಹಾಕಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಪಿ. ಕೇಶವ ಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) ರಾಷ್ಟ್ರೀಯ ನಂದನವನ ಕೈಗೊಳ್ಳುವ ವಿಚಾರ ಗಮನಕ್ಕೆ ಬಂದಿರುವುದಿಲ್ಲ. ಆದರೂ ಅಂದಾಜು ಸಮಿತಿಯು ತಮ್ಮ 91-92ನೇ ಸಾಲಿನ ಮೂರನೇ ವರದಿ (ಒಂಬತ್ತನೇ ವಿಧಾನ ಸಭೆ)ಯಲ್ಲಿ ಶ್ರೀ ಕ್ಷೇತ್ರ ಸೋಗಲ ಇಲ್ಲಿ ಉದ್ಯಾನವನ ಮಾಡುವ ಎಲ್ಲಾ ಸೌಕರ್ಯ ಹೊಂದಿರುವುದರಿಂದ ಸರ್ಕಾರದವರು ಕೂಡಲೇ ರೂ. 25.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಶಿಫಾರಸ್ಸು ಮಾಡಿರುತ್ತದೆ.

2. ಈಗಾಗಲೇ ಶ್ರೀ ಕ್ಷೇತ್ರ ಸೋಗಲದಲ್ಲಿ ಒಂದು ಚಿಗರೆ ವನದ ನಿರ್ಮಾಣ ಕೆಲಸವನ್ನು ಕೈಗೆತ್ತಿಗೊಂಡಿದ್ದು ಇದು ಮುಕ್ತಾಯ ಹಂತದಲ್ಲಿದ್ದು ಇದುವರೆಗೆ ರೂ. 4.35 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

3. ಸರ್ಕಾರವು ಬಿಡುಗಡೆ ಮಾಡುವ ಅನುದಾನ ಚೌಕಟ್ಟಿನಲ್ಲಿ ಒಳಗೆ ಈ ಕ್ಷೇತ್ರದಲ್ಲಿ ಸಾಧ್ಯವಾದಷ್ಟು ಹೆಚ್ಚಿಗೆ ಅರಣ್ಯವನ್ನು ಬೆಳಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಇಲ್ಲಿವರೆಗೆ 103.69 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯವನ್ನು ಬೆಳೆಸಲಾಗಿದೆ.

4. ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಿ ಈ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು.

ರಾಜಾಜಿನಗರ ವಲಯಕ್ಕೆ ಸೇರಿದ ಶಾಲಾಕಟ್ಟಡಗಳಿಗೆ ಹಣ ಮಂಜೂರಾತಿ

432 - ಶ್ರೀ ಕೆ. ಲಕ್ಷ್ಮಣ (ರಾಜಾಜಿನಗರ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನ ಆಯವ್ಯಯದಲ್ಲಿ ರಾಜಾಜಿನಗರ ವಿಭಾಗಕ್ಕೆ ಸೇರಿದ ಶಾಲಾ ಕಟ್ಟಡ ಕಟ್ಟಲು ಎಷ್ಟು ಹಣ ಮಂಜೂರು ಮಾಡಿದೆ?

ಆ) ಹಾಗಿದ್ದಲ್ಲಿ ಅದರಲ್ಲಿ ಇದುವರೆವಿಗೂ ಬಿಡುಗಡೆ ಮಾಡಿದ ಹಣದ ಮೊತ್ತವೆಷ್ಟು?

ಇ) ಇಲ್ಲಿಯವರೆಗೂ ಶಾಲಾ ಕಟ್ಟಡಗಳಿಗಾಗಿ ವ್ಯಯ ಮಾಡಲಾಗಿರುವ ಹಣ ಎಷ್ಟು?

ಈ) ಇನ್ನುಳಿದ ಹಣವನ್ನು ಶೀಘ್ರದಲ್ಲಿಯೇ ಉದ್ದೇಶಿತ ಕಾರ್ಯಗಳಿಗಾಗಿ ಬಳಸಲು ಕ್ರಮಕೈಗೊಳ್ಳಲಾಗುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ರಾಜಾಜಿನಗರ ವಿಭಾಗಕ್ಕೆ 1993-94ನೇ ಸಾಲಿನಲ್ಲಿ 3ಕೆಲಸಗಳು ಮಂಜೂರಾಗಿದ್ದು ಒಟ್ಟು ಅಂದಾಜು ವೆಚ್ಚ ರೂ.12.00 ಲಕ್ಷಗಳು ಇದಕ್ಕೆ ಈ ಸಾಲಿನಲ್ಲಿ ರೂ.4.00 ಲಕ್ಷ ಅನುದಾನವಿರುತ್ತದೆ.

ಆ) ಈ ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಹಣ ಬಿಡುಗಡೆಯಾಗಿರುವುದಿಲ್ಲ. ಆದರೆ ಈ ವಿಭಾಗಕ್ಕೆ ಇದುವರೆವಿಗೂ ರೂ.15.86 ಲಕ್ಷ ಹಣ ಬಿಡುಗಡೆಯಾಗಿರುತ್ತದೆ.

ಇ) ಈ ವಿಭಾಗದಲ್ಲಿ ಇದುವರೆವಿಗೂ ರೂ.15.86 ಲಕ್ಷ ವೆಚ್ಚ ಮಾಡಲಾಗಿದೆ (ಫೆಬ್ರವರಿ ಅಂತ್ಯಕ್ಕೆ)

ಈ) ಕೆಲಸವು ಪ್ರಗತಿಯಾದ ಮೇರೆಗೆ ಹಣವನ್ನು ಖರ್ಚುಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಕಲಘಟಗಿ ತಾಲ್ಲೂಕ್ ಮಿಶ್ರಿ ಕೋಟೆ ಗ್ರಾಮದಲ್ಲಿ ಸರ್ಕಾರಿ ಉರ್ದು ಪ್ರೌಢಶಾಲೆ

469 - ಶ್ರೀ ಪಿ.ಸಿ. ಸಿದ್ದನಗೌಡರ (ಕಲಘಟಗಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಲಘಟಗಿ ತಾಲ್ಲೂಕು ಮಿಶ್ರಿಕೋಟೆ ಗ್ರಾಮದಲ್ಲಿ ಸರ್ಕಾರಿ ಉರ್ದು ಪ್ರೌಢಶಾಲೆಯನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ*

ಆ) *ಹಾಗಿದ್ದಲ್ಲಿ ಯಾವಾಗ ಆ ಪ್ರೌಢಶಾಲೆ ಪ್ರಾರಂಭಿಸಲಾಗುವುದು?*

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಸರ್ಕಾರದ ಮುಂದಿದೆ

ಆ) ಪರಿಶೀಲಿಸಲಾಗುವುದು.

ಕಲಘಟಗಿ ತಾಲ್ಲೂಕ್ ಹುಲಕೊಪ್ಪ ಮತ್ತು ಮಿಶ್ರಿಕೋಟೆ ಗ್ರಾಮದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜು

470 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಲಘಟಗಿ ತಾಲ್ಲೂಕಿನಲ್ಲಿ ಇರತಕ್ಕ ಒಟ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು?*

ಆ) *ಆ ತಾಲ್ಲೂಕು ಹುಲಕೊಪ್ಪ ಮತ್ತು ಮಿಶ್ರಿಕೋಟೆ ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?*

ಇ) *ಹಾಗಿದ್ದಲ್ಲಿ, 1994-95ನೇ ಸಾಲಿನಲ್ಲಿ ಆ ಮೇಲ್ಕಂಡ ಸ್ಥಳಗಳಲ್ಲಿ ಸರ್ಕಾರಿ ಪದವಿ ಪೂರ್ವಕಾಲೇಜನ್ನು ತೆರೆಯಲು ಸರ್ಕಾರ ಅನುಮತಿ ನೀಡುವುದೇ?*

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಕಲಘಟಗಿ ತಾಲ್ಲೂಕಿನಲ್ಲಿ ಯಾವುದೇ ಸರ್ಕಾರಿ ಪದವಿ ಪೂರ್ವ ಕಾಲೇಜು ಇರುವುದಿಲ್ಲ.

ಆ) ಹುಲಕೊಪ್ಪ ಮತ್ತು ಮಿಶ್ರಿಕೋಟೆ ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ತೆರೆಯುವ ಬಗ್ಗೆ ಪ್ರಸ್ತಾವನೆ ಬಂದಿರುವುದಿಲ್ಲ.

ಇ) ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವುದು.

ಕಲಘಟಗಿ ತಾಲ್ಲೂಕ್ ಬಮ್ಮಿಗಟ್ಟಿ ಗ್ರಾಮದಲ್ಲಿ ಪದವಿಪೂರ್ವ ಕಾಲೇಜು ಪ್ರಾರಂಭ

471 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?